ವಿಶ್ವವಿದ್ಯಾಲಯ ಮಟ್ಟದಲ್ಲಿ ವಿವಿಧ ಕ್ರೀಡೆಗಳ ಗುಣಮಟ್ಟ

1321(1732) ಶ್ರೀ ರೋಜರ್ ಬಿನ್ನಿ (ನಾಮನಿರ್ದೇಶನ) : ಮಾನ್ಯ ಯುವಜನ ಮತ್ತು ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಶ್ವವಿದ್ಯಾಲಯ ಮಟ್ಟದಲ್ಲಿ ವಿವಿಧ ಕ್ರೀಡೆಗಳ ಗುಣಮಟ್ಟವು ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದಕ್ಕೆ ಕಾರಣಗಳು?

ಇ) ವಿಶ್ವವಿದ್ಯಾಲಯ ಮಟ್ಟದಲ್ಲಿ ಕ್ರೀಡೆಗಳ ಗುಣಮಟ್ಟವನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಉಡುಪಿಯಲ್ಲಿ ನಿರ್ಮಾಣಗೊಳ್ಳಲಿರುವ ಜಿಲ್ಲಾ ಮಟ್ಟದ ಕ್ರೀಡಾಂಗಣ

1322 (1316) ಶ್ರೀ ಯು.ಆರ್.ಸಭಾಪತಿ (ಉಡುಪಿ) : ಮಾನ್ಯ ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿಯಲ್ಲಿ ನಿರ್ಮಾಣಗೊಳ್ಳಲಿರುವ ಜಿಲ್ಲಾ ಮಟ್ಟದ ಕ್ರೀಡಾಂಗಣಕ್ಕೆ ಗುದ್ದಲಿ ಪೂಜೆ ಯಾವಾಗ ನಡೆದಿದೆ?

ಆ) ಇಂದಿನವರೆಗೆ ಕ್ರೀಡಾಂಗಣಕ್ಕಾಗಿ ಮಂಜೂರಾತಿ ಆಗಿರುವ ಹಣವೆಷ್ಟು? ಕಾಮಗಾರಿಯಲ್ಲಿ ಆಗಿರುವ ಪ್ರಗತಿ ಏನು? ಇದಕ್ಕಾಗಿ ಬಿಡುಗಡೆ ಆಗಿರುವ ಹಣವೆಷ್ಟು?

ಇ) ಈ ಕಾಮಗಾರಿಯಲ್ಲಿನ ವಿಳಂಬಕ್ಕೆ ಕಾರಣವೇನು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ನಡೆದಿರುವುದಿಲ್ಲ.

ಆ) ಮತ್ತು ಇ) ಇದುವರೆಗೆ ಕ್ರೀಡಾಂಗಣಕ್ಕಾಗಿ ರೂ.೫೧.೮೫ ಲಕ್ಷಗಳು ಮಂಜೂರಾಗಿರುತ್ತದೆ. ಸಾರ್ವಜನಿಕರ ಸಹಾಯದಿಂದ ಕ್ರೀಡಾಂಗಣದ ಆಟದ ಮೈದಾನದ ಸ್ವಲ್ಪ ಭಾಗವನ್ನು ಸಮತಟ್ಟು ಮಾಡಲಾಗಿದೆ. ಮಂಜೂರು ಆಗಿರುವ ರೂ. ೫೧.೮೫ ಲಕ್ಷಗಳು ಬಿಡುಗಡೆಯಾಗಿರುತ್ತದೆ. ಆದರೆ, ಇದರಲ್ಲಿ ಯಾವುದೇ ವೆಚ್ಚ ಆಗಿರುವುದಿಲ್ಲ. ನೂತನವಾಗಿ ಉಡುಪಿ ಜಿಲ್ಲೆಯನ್ನು ಸೃಜಿಸಿರುವುದರಿಂದ ಉಡುಪಿ ತಾಲ್ಲೂಕು ಕ್ರೀಡಾಂಗಣವನ್ನು ಜಿಲ್ಲಾಕ್ರೀಡಾಂಗಣವನ್ನಾಗಿ